# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 930 (1139) |
| ಉತ್ತರಿಸುವ ದಿನಾಂಕ | 28-12-2022 |
| ಮಾನ್ಯ ಸದಸ್ಯರ ಹೆಸರು | ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಂದಾಯ ನಿವೇಶನ ಎಂದರೇನು; ಕಾನೂನಿನಲ್ಲಿ ಇವುಗಳ ಮಾನ್ಯತೆ ಏನು; (ವಿವರವಾದ ಮಾಹಿತಿ ನೀಡುವುದು) | ಸರ್ಕಾರದ ಸುತ್ತೋಲೆ ಸಂಖ್ಯೆ: RD 174 MUNOMU 2005 ದಿನಾಂಕ:23-08-2005 ರನ್ವಯ ಕಂದಾಯ ನಿವೇಶನವನ್ನು The Karnataka Regularization of Unauthorized Constructions in Urban Areas Act 1991 ರಲ್ಲಿ ಈ ಕೆಳಕಂಡಂತೆ ವ್ಯಾಖ್ಯಾನಿಸಲಾಗಿದೆ.<br><br><u>Revenue Site</u>: Means a Site formed without approval under the relevant law relating to town and country planning or the erection of building on land which has not been diverted in accordance with section 95 of the Karnataka Land Revenue Act 1964.<br><br>ಸದರಿ ಕಂದಾಯ ನಿವೇಶನಗಳು ಅನಧೀಕೃತ (illegal) ನಿವೇಶನಗಳಾಗಿರುತ್ತವೆ. |
| ಆ | ರಾಜ್ಯದಲ್ಲಿ ಕಂದಾಯ ನಿವೇಶನಗಳ ನೋಂದಣಿಯನ್ನು ಸ್ಥಗಿತಗೊಳಿಸಿರುವುದು ನಿಜವೇ; ಹಾಗಿದ್ದಲ್ಲಿ, ಸ್ಥಗಿತಗೊಳಿಸಲು ಕಾರಣಗಳೇನು; ಇದರಿಂದ ಸಾವಿರಾರು ಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು; | ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 344 ಮುನೋಮು 2008 ದಿನಾಂಕ: 06-04-2009 ಹಾಗೂ ಸದರಿ ಸುತ್ತೋಲೆಗೆ ನೀಡಲಾದ ತಿದ್ದುಪಡಿಗಳನ್ವಯ ನಿವೇಶನಗಳ ನೋಂದಣಿಗೆ ನಿಗಧಿಪಡಿಸಿರುವ ಅಗತ್ಯವಾದ ದಾಖಲೆಗಳನ್ನು ಪಕ್ಷಕಾರರು ದಸ್ತಾವೇಜುಗಳ ನೋಂದಣಿ ಸಮಯದಲ್ಲಿ ಹಾಜರುಪಡಿಸಿದ್ದಲ್ಲಿ ಅಂತಹ ದಸ್ತಾವೇಜುಗಳನ್ನು ನೋಂದಾಯಿಸಲಾಗುತ್ತಿದ್ದು, ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ವತ್ತುಗಳಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 06 ಮುನೋಮು 2013, ದಿನಾಂಕ: 18-07-2014 ರಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ವತ್ತುಗಳಿಗಾಗಿ ಇರುವ ಇ-ಸ್ವತ್ತು ತಂತ್ರಾಂಶದಿಂದ ಮಾಹಿತಿ ಪಡೆದು ನೋಂದಾಯಿಸಲಾಗುತ್ತಿದೆ. |
| ಇ | ಸ್ಥಗಿತಗೊಳಿಸಿರುವ ಕಂದಾಯ ನಿವೇಶನಗಳ ನೋಂದಣಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು; | |
| ಈ | ಕಂದಾಯ ನಿವೇಶನಗಳನ್ನು ನೋಂದಣಿ ಮಾಡಿಸಲು ಇರುವ ಮಾರ್ಗಸೂಚಿ ಷರತ್ತುಗಳೇನು? | |

ಸಂಖ್ಯೆ: ಕಂಇ/420/ಎಂಎನ್ಎಸ್ಎ/2022

(ಆರ್.ಅಶೋಕ)
ಕಂದಾಯ ಸಚಿವರು